# ಕೆಂಪು ಬಾಳೆ

■ ಮಲ್ಲಿಕಾರ್ಜುನ ಸುರಧೇನುಪುರ
ಕಲೆ: ಸಂತೋಷ್ ಸಸಿಹಿತ್ಲು



ಕಾಡಿನಲ್ಲಿ ಒಂದು ಕತ್ತೆಯಿತ್ತು. ಅದು ವಾಸವಿದ್ದ ಗುಹೆಯ ಮುಂದೆ ಒಂದು ಬಾಳೆ ಗಿಡ ಬೆಳೆದಿತ್ತು. ಮಳೆ ಇಲ್ಲದ ದಿನಗಳಲ್ಲಿಯೂ ಅದು ಹಸಿರಿನಿಂದ ನಳನಳಿಸುತ್ತಿತ್ತು. ಕಾರಣ ಮೇಲಿನ ಬೆಟ್ಟದಿಂದ ನೀರಿನ ಝರಿಯೊಂದು ಗುಹೆಯ ಮುಂದೆ ಹರಿದು ಹೋಗುತ್ತಿತ್ತು. ಕಾಡಿನಲ್ಲಿ ವಿಹಾರ ಮಾಡುತ್ತಿರುವಾಗ ಕತ್ತೆಗೆ ಅಡ್ಡಲಾಗಿ ಹುಲಿ ಬಂದಿತು. ಕತ್ತೆ ಒಂಚೂರೂ ವಿಚಲಿತವಾಗದೆ ಹುಲಿರಾಯನ ಯೋಗಕ್ಷೇಮ ವಿಚಾರಿಸಿತು. ಈ ನಡೆಯಿಂದ ಹುಲಿರಾಯನಿಗೆ ನನ್ನ ಕಂಡೊಡನೆ ಮರೆಯಾಗುವ ಜೀವಿಗಳ ನಡುವೆ ಕತ್ತೆಯದು ವಿಚಿತ್ರ ಸ್ವಭಾವವೇ ಸರಿ ಎಂದುಕೊಳ್ಳುತ್ತ ಹುಲಿರಾಯನು ಕತ್ತೆಯ ಯೋಗಕ್ಷೇಮ ವಿಚಾರಿಸಿದ. ಇದರಿಂದ ಖುಷಿಯಾದ ಕತ್ತೆಯು 'ನಮ್ಮ ಮನೆಯ ಮುಂದೆ ಕೆಂಪು ಬಣ್ಣದ ಬಾಳೆ ಗಿಡ ಇದೆ. ಒಮ್ಮೆ ನೋಡಿದರೆ ನೋಡುತ್ತಲೆ ಇರಬೇಕೆನಿಸುತ್ತದೆ. ನೀನೊಮ್ಮೆ ಬಂದು ನೋಡಬೇಕು' ಎಂದಿತು.

ಹುಲಿರಾಯನು ಕುತೂಹಲದಿಂದ 'ಅದಕ್ಕೇನಂತೆ ಈಗಲೇ ನೋಡೋಣ ನಡಿ' ಎಂದಿತು. ಇಬ್ಬರು ಮಾತಾನಾಡುತ್ತ ಗುಹೆಯ ಬಳಿ ಬಂದವು. ಹುಲಿರಾಯ 'ಎಲ್ಲಯ್ಯಾ ಕೆಂಪಾದ ಬಾಳೆಗಿಡ' ಎಂದಿತು. ಅದಕ್ಕೆ ಕತ್ತೆ ಎದುರಿಗಿದ್ದ ಬಾಳೆಗಿಡವನ್ನ ತೋರಿಸಿತು. ಆಗ ಹುಲಿರಾಯನು 'ಏನಯ್ಯ ಕತ್ತೆ ತಮಾಷೆ ಮಾಡ್ತಾ ಇದ್ದೀಯಾ ಹಸಿರಾದ ಬಾಳೆಗಿಡ ತೋರಿಸಿ ಕೆಂಪು ಬಾಳೆಗಿಡ ಅಂತಿದ್ದೀಯಾ ಯಾರ ಬಳಿ ಮಾತಾಡ್ತಾ ಇದ್ದೀನಿ ಅನ್ನೋ ಪ್ರಜ್ಞೆ ಏನಾದ್ರೂ ಇದೆಯಾ?' ಎಂದಿತು. ಅದಕ್ಕೆ ಕತ್ತೆಯು 'ನಾನು ಹುಟ್ಟಿದಾಗಿನಿಂದ ನೋಡ್ತಾ ಇದೀನಿ ಈ ಬಾಳೆಗಿಡ ಕೆಂಪು ನನ್ನ ಹತ್ರ ವಾದ ಮಾಡ್ತೀಯಾ' ಎಂದಿತು. ಈ ವಾದವನ್ನು ಕೇಳಿಸಿಕೊಂಡ ಅಳಿಲು 'ಸರಿ. ನೀವಿಬ್ರೂ ವಾದ ಮಾಡಿಕೊಂಡೆ ಇದ್ರೆ ಸಮಸ್ಯೆ ಇತ್ಯರ್ಥ ಆಗೋಲ್ಲ. ಕಾಡಿನ ರಾಜ ಮೃಗರಾಜ ಸಿಂಹನ ಬಳಿ ಹೋಗೋಣ ನಡೆಯಿರಿ' ಎಂದಿತು. ಅಳಿಲು ಕತ್ತೆಯ ಬೆನ್ನೇರಿ ಕೂತುಕೊಂಡಿತು.

ಮೃಗರಾಜನ ಬಳಿ ಬಂದವು. ಕತ್ತೆ ಮತ್ತು ಹುಲಿರಾಯನ ಸಮಸ್ಯೆಯನ್ನ ಅಳಿಲು ಮೃಗರಾಜನ ಮುಂದೆ ಹೇಳಿತು. ಮೃಗರಾಜನು ಕೆಂಪು ಬಾಳೆಗಿಡ ನೋಡುವ ಉತ್ಸುಕತೆಯಿಂದ 'ನಡೆಯಿರಿ ಈಗಲೇ ಆ ಬಾಳೆಗಿಡವನ್ನ ನಾನೂ ನೋಡುತ್ತೇನೆ' ಎಂದಿತು. ಮೃಗರಾಜನ ಹಿಂದೆ ಕತ್ತೆ, ಕತ್ತೆಯ ಬೆನ್ನಿನ ಮೇಲೆ ಅಳಿಲು ಮತ್ತು ಹುಲಿರಾಯ ಹಿಂಬಾಲಿಸಿದವು. ಗುಹೆಯ ಮುಂದೆ ಬಂದ ಕೂಡಲೇ ಕತ್ತೆಯು 'ಇದೇ ಮೃಗರಾಜ ಆ ಕೆಂಪು ಬಾಳೆಗಿಡ' ಎಂದಿತು.

ಮೃಗರಾಜ 'ಆಹಾ ಎಷ್ಟು ಚೆನ್ನಾಗಿದೆ, ಈ ಕೆಂಪು ಬಾಳೆಗಿಡ' ಎಂದಿತು. ಹುಲಿಯತ್ತ ಮುಖಮಾಡಿ 'ಹುಲಿರಾಯ ಒಂದು ತಿಂಗಳ ಕಾಲ ಮೌನವ್ರತ ಆಚರಿಸಬೇಕು, ಯಾರ ಬಳಿಯಾದರೂ ವಾದ ವಿವಾದ ಮಾಡಿದ್ದು ನನ್ನ ಕಿವಿಗೆ ಬಿದ್ದರೆ ಶಿಕ್ಷೆಯನ್ನು ಒಂದು ವರ್ಷಕ್ಕೆ ವಿಸ್ತರಿಸಬೇಕಾದೀತು? ಎಚ್ಚರ' ಎಂದು ತೀರ್ಪು ನೀಡಿ ತನ್ನ ಗುಹೆಯತ್ತ ಹೊರಟಿತು. ತಾನು ಗೆದ್ದೆನೆಂಬ ಖುಷಿಯಲ್ಲಿ ಕತ್ತೆಯ ಮುಖ ಆಗ ತಾನೆ ಬಿರಿದ ಗುಲಾಬಿಯಂತೆ ಅರಳಿತು. ಪೆಚ್ಚು ಮುಖಭಾವದಿಂದ ಹುಲಿರಾಯನು ಮೃಗರಾಜನ ಹಿಂಬಾಲಿಸಿದ. ಮಾರ್ಗ ಮಧ್ಯದಲ್ಲಿ ಹುಲಿರಾಯನು 'ಮೃಗರಾಜ, ಆ ಬಾಳೆಗಿಡ ನಿಜವಾಗಿಯೂ ಕೆಂಪು ಬಣ್ಣದ್ದೆ? ಎಂದು ಕೇಳಲು. ಮೃಗರಾಜ 'ಹುಲಿರಾಯ ನಿಜವಾಗಿಯೂ ಆ ಬಾಳೆಗಿಡ ಹಸಿರು ಬಣ್ಣದ್ದೆ' ಎಂದು ಉತ್ತರ ನೀಡಿತು.

ಹುಲಿರಾಯ 'ಮತ್ತೆ ನನಗೇಕೆ ಶಿಕ್ಷೆ'. ಮೃಗರಾಜ 'ಅದು ಕತ್ತೆಯೆಂದು ಗೊತ್ತಿದ್ದರೂ ಅದರ ಜೊತೆ ವಾಗ್ವಾದ ನಡೆಸಿದ್ದಕ್ಕೆ' ಎಂದು ಹೇಳಿತು. ■